(39)

114

**ಕರ್ನಾಟಕ ಸರ್ಕಾರ**

ಸಂಖ್ಯೆ: ಆರ್‌ಡಿ 79 ಎಂಆರ್‌ಆರ್ 2003

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 10ನೇ ಜುಲೈ 2003.

**ಸುತ್ತೋಲೆ**

ವಿಷಯ: ಜಮೀನಿನ ವರ್ಗಾವಣೆ ನಂತರ ಆರ್‌ಟಿಸಿ ನಮೂನೆ 16ರ ಕಾಲಂ 12(2)ಯಲ್ಲಿ ನಮೂದು ಬದಲಾವಣೆ ಬಗ್ಗೆ.

ಕೆಲವು ಕಂದಾಯ ಅಧಿಕಾರಿಗಳು ಜಮೀನು ವರ್ಗಾವಣೆಯಾದ ನಂತರ ಏನು ಮಾಡಬೇಕೆಂಬ ಬಗ್ಗೆ ಅನುಮಾನ ವ್ಯಕ್ತ ಪಡಿಸಿರುತ್ತಾರೆ. ಆದರೆ, ಸ್ಥಾಯಿ ಬೆಳೆಯು ಹಿಂದಿನ ಭೂಮಾಲೀಕ/ಬೆಳೆಗಾರನೇ ಕಟಾವು ಮಾಡಿಕೊಳ್ಳಬೇಕೆಂದು ಇಬ್ಬರೂ ಒಪ್ಪಂದ ಮಾಡಿಕೊಂಡಿರುತ್ತಾರೆ. ಆರ್.ಟಿ.ಸಿ.ಯ ಕಾಲಂ 12(2)ರಲ್ಲಿ ಹಿಂದಿನ ಭೂಮಾಲೀಕ/ಬೆಳೆಗಾರನ ಹೆಸರು ಮುಂದುವರೆಯುವ ಬಗ್ಗೆ ಅವರು ಸ್ಪಷ್ಟೀಕರಣ ಕೇಳಿರುತ್ತಾರೆ.

ಆರ್.ಟಿ.ಸಿ.ಯ ನಮೂನೆ 16ರ ಕಂಡಿಕೆ 12(2) ಮತ್ತು ಅದರ ಮುಂದಿನ ನಮೂದುಗಳು ಕೇವಲ ಕೃಷಿಕರ ಮತ್ತು ಬೆಳೆಗಳ ವಿವರಗಳನ್ನಷ್ಟೇ ಅಲ್ಲದೆ ಜಮೀನಿನ ಸ್ವಾಧೀನದ ಸ್ವರೂಪವನ್ನು ಸಹ ಸೂಚಿಸುತ್ತದೆ.

ಹಿಂದಿನ ಭೂಮಾಲೀಕ/ಬೆಳೆಗಾರನಿಗೇ ಬೆಳೆ ಕಟಾವು ಮಾಡುವ ಹಕ್ಕು ಇರುವುದೆಂದು ಎರಡೂ ಭಾಗೀದಾರರೂ ಒಪ್ಪಂದ ಮಾಡಿಕೊಂಡಿದ್ದಾಗ್ಯೂ, ಜಮೀನು ಮಾರಾಟವಾದ ನಂತರ, ಅವನು ಬೆಳೆ ಕಟಾವಿನ ಹಕ್ಕನ್ನು ಒಪ್ಪಂದದ ಪ್ರಕಾರ ಹಿಂದಿನ ಭೂಮಾಲೀಕ/ಬೆಳೆಗಾರನಿಗೇ ನೀಡಿದರೂ ಸಹ ಜಮೀನು ಹೊಸ ಭೂಮಾಲೀಕನ ಸ್ವಾಧೀನದಲ್ಲೇ ಇರುವುದೆಂಬ ಅಂಶವು ಉಳಿಯುತ್ತದೆ.

ವಿಷಯ ಹೀಗಿರುವುದರಿಂದ, ಹಕ್ಕು ಬದಲಾವಣೆಯಾದ ನಂತರ ಪಹಣಿಯ ಕಾಲಂ 12(2) ಹೊಸ ಭೂಮಾಲೀಕನ ಹೆಸರನ್ನು ನಮೂದು ಮಾಡತಕ್ಕದ್ದು. ಈ ನಮೂದು ಬೆಳೆ ಕಟಾವಿನ ಬಗ್ಗೆ ಇಬ್ಬರು ಭಾಗಿದಾರರಲ್ಲಿ ಆದ ಒಪ್ಪಂದದ ನಡುವೆ ಬರುವುದಿಲ್ಲ.

ಅಂತೆಯೇ, ಜಮೀನು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬರಿಗೆ ವರ್ಗಾವಣೆಯಾಗುವ ಎಲ್ಲ ವ್ಯವಹಾರಗಳಲ್ಲೂ ಹೊಸ ಭೂಮಾಲೀಕನ ಹೆಸರನ್ನು ನಮೂನೆ 16ರ ಕಾಲಂ 12(2)ರಲ್ಲಿ ತಕ್ಷಣ ನಮೂದು ಮಾಡುವಂತೆ ಜಿಲ್ಲಾಧಿಕಾರಿಗಳು ಎಲ್ಲಾ ತಹಸೀಲ್ದಾರರು ಹಾಗೂ ಕಂದಾಯ ಅಧಿಕಾರಿಗಳಿಗೆ ಸೂಚಿಸತಕ್ಕದ್ದು.

ಈ ಸುತ್ತೋಲೆಯು ಕಂದಾಯ ಇಲಾಖೆ ಇಂಟರ್‌ನೆಟ್ ಸೈಟ್ http://www.revdept.kar.nic.in ನಲ್ಲೂ ಲಭ್ಯವಿದೆ.

ನಂ. ಆರ್ ಆರ್ ಟಿ (ಎ) 558 / 03-04

10/7/03

(ರಾಜೀವ್ ಚಾವ್ಲಾ)
ವಿಶೇಷ ಕಾರ್ಯದರ್ಶಿ (ಭೂಮಿ)
ಕಂದಾಯ ಇಲಾಖೆ

ಎಲ್ಲಾ ಜಿಲ್ಲಾಧಿಕಾರಿಗಳಿಗೆ.

ನಂ ಆರ್ ಆರ್ ಟಿ 85 / 03-04

ಎಲ್ಲಾ ತಾಲ್ಲೂಕುಗಳಿಗೆ ಹೊರಡಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ, ಹಾಸನ.